# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.122-2019** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಬಸವರಾಜು<br>ದೇವಿರಮ್ಮನಹಳ್ಳಿ ಹುಂಡಿ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 07-03-2024. |

**ಪಾಟೀ ಸವಾಲುಃ  ಪ್ರತಿವಾದಿಗಳ ಶ್ರೀ ಎಸ್.ಎಸ್   ವಕೀಲರಿಂದಃ**

ನಾನು ದೇವಿರಮ್ಮನಹಳ್ಳಿಹುಂಡಿ ಗ್ರಾಮದವನಾಗಿದ್ದು, ವಾದಿಯವರು ಹರತಲೆ ಗ್ರಾಮದವರಾಗಿರುತ್ತಾರೆ. ದೇವಿರಮ್ಮನಹಳ್ಳಿಹುಂಡಿಗೂ ಹರತಲೆಗೂ ಸುಮಾರು 3 ಕಿ.ಮೀ ಅಂತರ ಇರುತ್ತದೆ. ವಾದಿ ನನ್ನ ಸಂಬಂಧಿಯಾಗಬೇಕು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ಜಮೀನು ಅಕ್ಕ-ಪಕ್ಕದಲ್ಲಿ ಇರುವುದನ್ನು ಸುಮಾರು 12 ವರ್ಷಗಳಿಂದ ನೋಡಿದ್ದು ಸುಮಾರು 10-12 ಭಾರಿ ಸದರಿ ಜಮೀನಿನ ಬಳಿ ಹೋಗಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳು ದಾಯಾದಿಗಳು. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವಾಗ ಒಪ್ಪಂದ ಆಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವಾದಿಯು ತೆಂಗಿನ ಮರಗಳನ್ನು ತೆಗೆದಿದ್ದು, ಪ್ರತಿವಾದಿ ತೆಂಗಿನ ಮರಗಳನ್ನು ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ. ತೆಂಗಿನ ಮರಗಳನ್ನು ತೆಗೆಯುವ ಸಂಬಂಧ ಪಂಚಾಯ್ತಿ ಆಗಿತ್ತೇ ಇಲ್ಲವೇ ಎಂದು ಗೊತ್ತಿಲ್ಲ. ವಾದಿ ವಿಷಯ ಹೇಳಿದ್ದರಿಂದ ನನಗೆ ತಿಳಿಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸ್ವತಃ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಬರವಣಿಗೆಯಲ್ಲಿ ಯಾವುದೇ ಒಪ್ಪಂದ ಆಗಿರುವುದಿಲ್ಲ, ಸದರಿ ಒಪ್ಪಂದಕ್ಕೆ ನಾನು ಸಹಿ ಮಾಡಿರುವುದಿಲ್ಲ. ವಾದಿಯವರು ತೆಂಗಿನ ಮರಗಳನ್ನು

ತೆಗೆದ ಸಮಯ ನಾನು ಹಾಜರಿರಲಿಲ್ಲ, ವಾದಿಯವರ ಹೇಳಿದ್ದರಿಂದ ತೆಂಗಿನ ಮರಗಳನ್ನು ತೆಗೆದ ಬಗ್ಗೆ ನನಗೆ ತಿಳಿಯಿತು ಎಂದು ನುಡಿಯುತ್ತಾರೆ. ವಾದಿ ನನ್ನ ಸಂಬಂಧಿಯಾಗಿರುವುದರಿಂದ ಅವರಿಗೆ ಅನೂಕೂಲ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರು ಸುಮಾರು 10-15 ತೆಂಗಿನ ಮರಗಳನ್ನು ತೆಗೆದಿರಬಹುದು, ಎಷ್ಟು ಮರಗಳನ್ನು ತೆಗೆದಿದ್ದಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**